## ಫೆರಿಟ್ ಒರ್ಹಾನ್ ಪಾಮುಕ್



ನಾಲ್ಕು ದಶಕಗಳ ಕಾಲಕ್ಕಿಂತ ಮಿಗಿಲಾಗಿ ಬರಹವನ್ನೇ ವೃತ್ತಿಯಾಗಿಸಿಕೊಂಡಿರುವ ಟರ್ಕಿಯ ಲೇಖಕ ಫೆರಿಟ್ ಒರ್ಹಾನ್ ಪಾಮುಕ್ ಹುಟ್ಟಿದ್ದು 7 ಜೂನ್, 1952. 2006ನೆಯ ಇಸವಿಯ ನೊಬೆಲ್ ಸಾಹಿತ್ಯ ಬಹುಮಾನ ಪುರಸ್ಕೃತ ಪಾಮುಕ್ ಕೃತಿಗಳು 63 ಭಾಷೆಗೆ ಅನುವಾದಗೊಂಡಿದ್ದು, ಒಟ್ಟಾರೆ ಒಂದು ಕೋಟಿ ಮೂವತ್ತುಲಕ್ಷ ಪ್ರತಿಗಳು ಮಾರಾಟವಾಗಿವೆ.

ಪಾಮುಕ್ ಹುಟ್ಟಿ ಬೆಳೆದದ್ದು ಇಸ್ತಾಂಬುಲ್ ನಗರದ ಶ್ರೀಮಂತ ಕುಟುಂಬದಲ್ಲಾದರೂ ಅವನು ಹುಟ್ಟುವ ಹೊತ್ತಿಗೆ ಮನೆತನದ ಸಂಪತ್ತು ಕ್ಷೀಣಿಸುತ್ತಿತ್ತು. ಇಸ್ತಾಂಬುಲ್‌ನ ರಾಬರ್ಟ್ ಕಾಲೇಜ್ ಸೆಕೆಂಡರಿ ಸ್ಕೂಲಿನಲ್ಲಿ ಓದಿ ಆನಂತರ ಇಸ್ತಾಂಬುಲ್ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಆರ್ಕಿಟೆಕ್ಚರ್ ಅಧ್ಯಯನ ಮಾಡಿದ. ಮೂರು ವರ್ಷ ಅಲ್ಲಿ ಓದಿದವನು; ಆನಂತರ ಪೂರ್ಣ ಪ್ರಮಾಣದ ಲೇಖಕನಾಗಲು ಬಯಸಿ 1976ರಲ್ಲಿ ಇಸ್ತಾಂಬುಲ್ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂನಲ್ಲಿ ಪದವೀಧರನಾದ.

'ಮೈ ನೇಮ್ ಈಸ್ ರೆಡ್' (1998) ಕಾದಂಬರಿಯಿಂದ ಪಾಮುಕ್‌ಗೆ ಅಂತರರಾಷ್ಟ್ರೀಯ ಖ್ಯಾತಿ ದೊರೆಯಿತು. 16ನೇ ಶತಮಾನದ ಇಸ್ತಾಂಬುಲ್ ನಗರದಲ್ಲಿ ನಡೆಯುವ ಕಥೆ ಆಟ್ಟೊಮನ್ ಚಕ್ರವರ್ತಿ ಸುಲ್ತಾನ್ ಮೂರನೆಯ ಮೂರತ್‌ನ ಆಳ್ವಿಕೆಯ ದಿನಗಳನ್ನು ಚಿತ್ರಿಸುತ್ತದೆ. ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿಗಳ ನಡುವೆ ಇರುವ ಟೆನ್ಶನ್ ಚಿತ್ರಣ ಅವನಿಗೆ ಖ್ಯಾತಿ ತಂದುಕೊಟ್ಟಿತು.

'ಸ್ನೋ' (2002) ಕಾದಂಬರಿಯು ಇಸ್ಲಾಂ ಮತ್ತು ಪಾಶ್ಚಾತ್ಯವಾದಗಳ ಬಗ್ಗೆ ಟರ್ಕಿಯಲ್ಲಿ ಇದ್ದ ಸಂಘರ್ಷವನ್ನು ಚಿತ್ರಿಸುತ್ತದೆ. ರಾಜಕೀಯ ಕಾದಂಬರಿ ಕುರಿತು ಸಂದರ್ಶನವೊಂದರಲ್ಲಿ ಹೇಳಿದ ಮಾತು ಇದು: 'ಕಾದಂಬರಿ ಕಲೆಯು ಮನುಷ್ಯ ಸಾಮರ್ಥ್ಯವನ್ನು ಆಧರಿಸಿದ್ದು. ಇದು ಪರಿಮಿತವಾದುದಾದರೂ 'ಅನ್ಯ'ದೊಡನೆ ಗುರುತಿಸಿಕೊಳ್ಳುವ ಸಾಮರ್ಥ್ಯ ಇರುವುದು ಮುನುಷ್ಯರಿಗೆ ಮಾತ್ರ. ಇದಕ್ಕೆ ಕಲ್ಪನೆ, ನೈತಿಕತೆ, ನಮಗಿಂತ ಭಿನ್ನರಾದವರನ್ನು ಅರ್ಥಮಾಡಿಕೊಳ್ಳಬೇಕೆಂಬ ಸ್ವ ನಿರ್ಧಾರಿತ ಗುರಿ ಇವೆಲ್ಲ ಬೇಕು' ಎಂದು ಹೇಳಿದ್ದ.

## ಓ.ಎಲ್. ನಾಗಭೂಷಣ ಸ್ವಾಮಿ

ಕನ್ನಡದ ಮುಂಚೂಣಿಯ ಬರಹಗಾರ ಓ.ಎಲ್.ಎನ್. ವಿಮರ್ಶೆ, ಅನುವಾದ, ಸಂಪಾದನೆಯ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. 'ವಿಮರ್ಶೆಯ ಪರಿಭಾಷೆ', 'ನನ್ನ ಹಿಮಾಲಯ', 'ಕನ್ನಡಕ್ಕೆ ಬಂದ ಕವಿತೆ', 'ಯುದ್ಧ ಮತ್ತು ಶಾಂತಿ', 'ಏಕಾಂತ ಲೋಕಾಂತ', 'ನುಡಿಯೊಳಗಾಗಿ', 'ಪುರಾಣ', 'ಸಿಂಗರನ ಕತೆಗಳು' ಸೇರಿದಂತೆ ಅವರ 40ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗಿವೆ. ದಾರ್ಶನಿಕ ಜಿಡ್ಡು ಕೃಷ್ಣಮೂರ್ತಿ ಪುಸ್ತಕಗಳನ್ನು ಕನ್ನಡಕ್ಕೆ ತಂದಿದ್ದಾರೆ. ಹಲವು ಪುಸ್ತಕಗಳನ್ನು ಸಂಪಾದಿಸಿರುವ ಓ.ಎಲ್.ಎನ್. ಕನ್ನಡ ವಚನಗಳು, ತತ್ವಪದಗಳಿಗೆ ಸಂಬಂಧಿಸಿದಂತೆಯೂ ಕೆಲಸ ಮಾಡಿದ್ದಾರೆ.